# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ-9611/2018/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 29/02/2020

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿ, ಎಂ.ಹೆಚ್.ಪಟ್ಟಣ ಗ್ರಾಮದಿಂದ ಚಿಕ್ಕನಾಗಮಂಗಲ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ಬಿಳಿಕಲ್ಲು ಗ್ರಾಮದ ಸರ್ವೆ ನಂ. 15/12.3.4 ರಸ್ತೆ ಖರಾಬು ಜಾಗದ ಒತ್ತುವರಿ ತೆರವು ಮಾಡಿ ಸಾರ್ವಜನಿಕರಿಗೆ ಹಾಗೂ ಅಕ್ಕಪಕ್ಕದ ಜಮೀನಿನ ರೈತರಿಗೆ ಓಡಾಡಲು ಅನುಕೂಲವಾಗುವಂತೆ ರಸ್ತೆ ಹಾಗೂ ಸೇತುವೆ ನಿರ್ಮಿಸಲು ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ನಾಗರಾಜ್ ಜಿ.ಎಸ್. ಬಿನ್ ಲೇಟ್ ಸಂಜೀವಪ್ಪ, ಎಂ.ಹೆಚ್.ಪಟ್ಟಣ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಗಂಗಾಧರ್, ಆರಕ್ಷಕ ಉಪನಿರೀಕ್ಷಕರು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು, (2) ಶ್ರೀ ಮೋಹನ್ ಕುಮಾರ್.ಜಿ.ವಿ., ತಹಶೀಲ್ದಾರ್, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ನ್ಯಾಯಾಲಯದ ಆದೇಶದ ಪ್ರಕಾರ ದೂರುದಾರರ ಜಮೀನಿನಲ್ಲಿ ಒತ್ತುವರಿ ಮಾಡಿದ ಜಮೀನನ್ನು ಬಿಡಿಸಿಕೊಟ್ಟು ನಕಾಶೆಯಲ್ಲಿ ಕಂಡಂತೆ ಸರ್ಕಾರಿ ರಸ್ತೆಯನ್ನು ಸ.ನಂ.16/7ರಲ್ಲಿ ಹಾದುಹೋಗುವಂತೆ ಮಾಡಲು ಎದುರುದಾರರಿಗೆ ಅರ್ಜಿ ನೀಡಿದರೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಕಾರಣ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಲು ಕೋರಿರುತ್ತಾರೆ.

3. ದೂರಿನ ಜೊತೆಗೆ ಎದುರುದಾರರಿಗೆ ಕ್ರಮಕೈಗೊಳ್ಳಲು ನೀಡಿದ ಅರ್ಜಿಯ ಪ್ರತಿ(ನಿಶಾನೆ–ಡಿ), ಉಪವಿಭಾಗಾಧಿಕಾರಿಗಳು, ತುಮಕೂರು ಅವರಿಗೆ ಸಲ್ಲಿಸಿದ ಅರ್ಜಿಯ ಪ್ರತಿ(ನಿಶಾನೆ–ಬಿ), ತಹಶೀಲ್ದಾರರು 1ನೇ ಎದುರುದಾರರಿಗೆ ಬರೆದ ಪತ್ರದ ಪ್ರತಿ(ನಿಶಾನೆ.ಸಿ), ಪಕ್ಕದ ಜಮೀನಿನ ಮಾಲೀಕರಾದ ರಾಜಣ್ಣ ತಹಶೀಲ್ದಾರರಿಗೆ ಬರೆದುಕೊಟ್ಟ ಒಪ್ಪಿಗೆ ಪತ್ರದ ಪ್ರತಿ(ನಿಶಾನೆ–ಎ), ತಹಶೀಲದಾರರಿಗೆ ನೀಡಿದ 'ಡಿ' ಎಂದು ಗುರುತಿಸಿದ ಅರ್ಜಿಯಲ್ಲಿ ದೂರುದಾರರ ಹೆಂಡತಿ ಅವರ ಜಮೀನಿನ ಉತ್ತರದ ಕಡೆಯ ಜಮೀನುದಾರರು ಒತ್ತುವರಿ ಮಾಡಿದ್ದು ಸದರಿಯವರ ಜಮೀನು 16/3ರಲ್ಲಿ ಎಂ.ಹೆಚ್.ಪಟ್ಟಣದಿಂದ ಚಿಕ್ಕನಾಗಮಂಗಲಕ್ಕೆ ಹಾದುಹೋಗುವ ರಸ್ತೆಯನ್ನು ಮುಚ್ಚಿಹಾಕಿದ್ದು, ದೂರುದಾರರ ಹೆಂಡತಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಅವರ ಜಮೀನಿನಲ್ಲಿ ಒತ್ತುವರಿಯನ್ನು ತೆರವುಗೊಳಿಸಲು ಮತ್ತು ಸ.ನಮ.16/3ರಲ್ಲಿ ರಸ್ತೆ ಮಾಡಲು ಆದೇಶ ಪಡೆದುಕೊಂಡಿದ್ದು, ಸದರಿ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಅದರಂತೆ ಒತ್ತುವರಿ ತೆರವುಗೊಳಿಸಲು ಮತ್ತು 16/3ರಲ್ಲಿ ನಕಾಶೆ ರಸ್ತೆ ಮಾಡಲು ಕೋರಿರುವುದು ಕಂಡುಬರುತ್ತದೆ. ನಿಶಾನೆ.ಬಿ ಎಂದು ಗುರುತಿಸಲಾದ ದಾಖಲೆ ಉಪವಿಭಾಗಾಧಿಕಾರಿ, ತುಮಕೂರು ಅವರಿಗೆ ನೀಡಿದ ಅರ್ಜಿಯಾಗಿರುತ್ತದೆ. ತಹಶೀಲ್ದಾರರಿಗೆ ನೀಡಿದ ಅರ್ಜಿಯ ಅಂಶಗಳನ್ನು ಈ ಅರ್ಜಿಯಲ್ಲಿ ತಿಳಿಸಿರುತ್ತಾರೆ. ನಿಶಾನೆ.ಸಿ ಎಂದು ಗುರುತಿಸಿದ ದಾಖಲೆಯಲ್ಲಿ ದಿ.22.5.2017ರಂದು ಗುಬ್ಬಿ ತಹಶೀಲ್ದಾರರು ಸಿಪಿಐ, ಗುಬ್ಬಿ, ಅವರಿಗೆ ಹೆಚ್.ಎಂ.ಪಟ್ಟಣ ಗ್ರಾಮದಿಂದ ಚಿಕ್ಕನಾಗಮಂಗಲ ಗ್ರಾಮಕ್ಕೆ ಕೆಲವ ಸ.ನಂ.ಜಮೀನಿನ ಮೂಲಕ ಹಾದುಹೋಗುವ ನಕಾಶೆಯಲ್ಲಿನ ಸರ್ಕಾರಿ ರಸ್ತೆ ಒತ್ತುವರಿ ಮಾಡಿದ್ದನ್ನು ತೆರವುಗೊಳಿಸಲು ಪೋಲೀಸ್ ರಕ್ಷಣೆ ಕೋರಿದ್ದು ಇರುತ್ತದೆ. ಸಿಪಿಐ ರವರು ದಿನಾಂಕ ಮತ್ತು ಸಮಯ ತಿಳಿಸಿದರೆ ತೆರವು ಕಾರ್ಯಾಚರಣೆಗೆ ಪೋಲೀಸ್ ಬಂದೋಬಸ್ತು ನೀಡಲಾಗುವುದೆಂದು ತಿಳಿಸಿರುತ್ತಾರೆ. ನಿಶಾನೆ.ಎ ಎಂದು ಗುರುತಿಸಿದ ದಾಖಲೆ ಜಮಿನು ಸ.ನಂ. 15/1ರ ಮಾಲೀಕರು ತಹಶೀಲ್ದಾರರಿಗೆ ದಿನಾಂಕ: 16/04/2015 ರಂದು ಬರೆದುಕೊಟ್ಟ ಒಪ್ಪಿಗೆ ಪತ್ರವಾಗಿದ್ದು, ನಕಾಶೆಯ ಪ್ರಕಾರ ರಸ್ತೆಯು ಆತನಿಗೆ ಸೇರಿದ ಸ.ನಂ.15/1ರಲ್ಲಿ ಮಧ್ಯಭಾಗದಲ್ಲಿ ಹಾದುಹೋಗಿರುತ್ತದೆ, ಆದರೆ ಆತ ಜಮೀನಿನಲ್ಲಿ ಅಡಿಗೆ ಮತ್ತು ತೆಂಗಿನ ಮರಗಳನ್ನು ಬೆಳೆದಿದ್ದರಿಂದ ರಸ್ತೆಯನ್ನು ಪಕ್ಕದ ಜಮೀನಿನ ಸ.ನಂ.16/3ರ ಮೂಲಕ ಹಾದುಹೋಗುವ ರಸ್ತೆಗೆ ಸೇರಿಸಲಾಗಿದೆಯೆಂದು ತಿಳಿಸಿರುತ್ತಾರೆ.

4. ದೂರು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ನಕಾಶೆಯ ರಸ್ತೆಯನ್ನು ದೂರುದಾರರ ಜಮೀನಿನ ಅಕ್ಕಪಕ್ಕದವರು ಅತಿಕ್ರಮಿಸಿ ದೂರುದಾರರಿಗೆ ಅವರ ಜಮೀನಿಗೆ ಹೋಗದಂತೆ ತಂತಿಬೇಲಿ ಹಾಕಿದ್ದು

BP-9611/2018/DRE-2

ಕಂಡುಬರುತ್ತದೆ. ದೂರುದಾರರು ಸಲ್ಲಿಸಿದ ಅರ್ಜಿಯ ಮೇರೆಗೆ ತಹಶೀಲ್ದಾರರು ಸೂಕ್ತ ಪೋಲೀಸ ನೆರವು ಪಡೆದು ರಸ್ತೆ ತೆರವುಮಾಡಲು ಪ್ರಯತ್ನಿಸಿದ್ದು ಕಂಡುಬರುತ್ತದೆ. ಆದರೆ ದೂರಿನಲ್ಲಿ ಇನ್ನೂ ರಸ್ತೆಯನ್ನು ತೆರವುಗೊಳಿಸಿಲ್ಲವೆಂದು ಆಪಾದಿಸಿರುವ ಕಾರಣ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಲು ಸಾಕಷ್ಟು ಅಂಶಗಳು ಮೇಲ್ನೋಟಕ್ಕೆ ಕಂಡುಬರುತ್ತವೆ ಎಂದು ಎದುರುದಾರರ ಆಕ್ಷೇಪಣೆ ಕೋರಲಾಗಿತ್ತು.

5. 1ನೇ ಎದುರುದಾರರು ತಮ್ಮ ಆಕ್ಷೇಪಣೆ ಸಲ್ಲಿಸಿ ಅದರಲ್ಲಿ, ದೂರುದಾರರ ಮತ್ತು ಅದೇ ಗ್ರಾಮದ ಕೆಲವು ಜನರ ಮಧ್ಯೆ ಜಮೀನಿನ ವಿಚಾರಕ್ಕೆ ಸಂಬಂಧಪಟ್ಟಂತೆ ವೈಮನಸ್ಸಾಗಿ ಕೇಸುಗಳು ಆಗಿ ನ್ಯಾಯಾಲಯದಲ್ಲಿ ಪ್ರಕರಣಗಳು ವಿಚಾರಣೆಗೆ ಬಾಕಿ ಇರುತ್ತವೆ. ದೂರುದಾರರು ತನ್ನ ಪರವಾಗಿ ಮಾತನಾಡುವಂತೆ ಮತ್ತು ಕೆಲ ಜನರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪದೇ ಪದೇ ತಮ್ಮ ಕಛೇರಿಗೆ ಬಂದು ಕೋರಿಕೊಂಡರೂ ಸಹಿತ ತಾನು ಆತನ ಪರವಾಗಿ ಸಹಕರಿಸಿಲ್ಲ ಎನ್ನುವ ಕಾರಣಕ್ಕಾಗಿ ತನ್ನ ವಿರುದ್ಧ ಇಲ್ಲಸಲ್ಲದ ಆಪಾದನೆ ಮಾಡಿ ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ತನ್ನ ವಿರುದ್ಧ ಇರುವ ಪ್ರಕರಣವನ್ನು ಮುಕ್ತಾಯ ಮಾಡಬೇಕೆಂದು ಕೋರಿದ್ದಾರೆ.

6. 2ನೇ ಎದುರುದಾರರಿಗೆ ಆಕ್ಷೇಪಣೆ ಸಲ್ಲಿಸಲು ಸಾಕಷ್ಟು ಕಾಲವಕಾಶ ನೀಡಿದ್ದರೂ ಸಹಿತ, ಅವರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ. ದಿನಾಂಕ: 10/01/2019ರ ತಹಶೀಲ್ದಾರ್, ಗುಬ್ಬಿ ಇವರ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ಕೆಲವು ಅಂಶಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ.

> "ದಾಖಲೆಗಳಂತೆ ಪರಿಶೀಲಿಸಲಾಗಿ ನಕಾಶೆ ರಸ್ತೆಯು ಬಿಳಿಕಲ್ಲು ಪಾಳ್ಯ ಗ್ರಾಮದ ಸರ್ವೆ ನಂ. 15/1.2.3.4 ರಲ್ಲಿ ಹಾದು ಹೋಗುತ್ತಿದ್ದು, ಈ ಹಿಂದೆ ಸರ್ವೆ ಕಾರ್ಯ ನಡೆಸಿದ್ದು ತೆರವುಗೊಳಿಸುವ ಸಂದರ್ಭದಲ್ಲಿ ಸದರಿ ನಕಾಶೆ ದಾರಿ ಹಾದುಹೋಗುವ ಪ್ರದೇಶದಲ್ಲಿ ಅಡಿಕೆ ಮತ್ತು ತೆಂಗು ಗಿಡಮರಗಳನ್ನು ಬೆಳೆಸಿದ್ದು ಈ ಹಿಂದೆ ಪುರಾತನ ಕಾಲದಿಂದಲೂ ನಕಾಶೆ ರಸ್ತೆ ಬದಲಿಗೆ ಪಕ್ಕದಲ್ಲಿ ಅವರ ಜಮೀನಲ್ಲಿಯೇ ದಾರಿಯನ್ನು ಬಿಟ್ಟಿದ್ದು ಸದರಿ ದಾರಿಗೆ ನಾವು ಯಾವುದೇ ರೀತಿಯ ತೊಂದರೆ ನೀಡಿರುವುದಿಲ್ಲವೆಂದು ಕೋರಿದ್ದರ ಮೇರೆಗೆ ಹಿಂದಿನಿಂದಲೂ ಹಾದು ಹೋಗುತ್ತಿರುವ ರಸ್ತೆಯಲ್ಲಿ ಓಡಾಡುವಂತೆ ಸುತ್ತಮುತ್ತಲಿನ ಗ್ರಾಮಸ್ಥರ ಸಮಕ್ಷಮ ತಹಶೀಲ್ದಾರ್ ರವರು ತೀರ್ಮಾನಿಸಲಾಗಿದ್ದು ಅದರಂತೆ ರಸ್ತೆಯನ್ನು ಬಿಟ್ಟಿದ್ದು ಸದರಿ ರಸ್ತೆಯನ್ನು ಸರ್ಕಾರದ ವತಿಯಿಂದ ಅಭಿವೃದ್ಧಿಪಡಿಸಿ ಜಲ್ಲಿ ರಸ್ತೆ ಮತ್ತು ಸೇತುವೆ ನಿರ್ಮಿಸಿ ಸಾರ್ವಜನಿಕರು ಹಾಗೂ ಅಕ್ಕಪಕ್ಕದ ಜಮೀನುದಾರರು ಓಡಾಡಲು ಅನುಕೂಲ ಕಲ್ಪಿಸಲಾಗಿತ್ತು. ಇತ್ತೀಚೆಗೆ ಎಂ.ಎಲ್.ರಾಜಣ್ಣ ಮತ್ತು ಮಗ ಸೇತುವೆಯನ್ನು ಕಿತ್ತುಹಾಕಿ ರಸ್ತೆಯಲ್ಲಿ ಗ್ರಾಮಸ್ಥರು ಹಾಗೂ ಜಮೀನುದಾರರು ಓಡಾಡಲು ತೊಂದರೆ ಉಂಟು ಮಾಡಿರುವುದು

BD-9611/2018/DRE-2

ತಿಳಿದುಬಂದಿರುತ್ತದೆ ಸದರಿ ಸ್ಥಳವನ್ನು ತಾಲ್ಲೂಕು ಸರ್ವೆಯರ್ ರವರಿಂದ ಅಳೆ ಮಾಡಿಸಿ ರಸ್ತೆ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಕ್ರಮ ವಹಿಸಲು ಸ್ವಲ್ಪ ಕಾಲಾವಕಾಶ ಬೇಕಾಗಿದ್ದು ಸದರಿ ಕಾರ್ಯ ನಿರ್ವಹಿಸಲು ದಯವಿಟ್ಟು ಸರ್ವೆಯವರಿಗೆ ತಿಳುವಳಿಕೆ ಪತ್ರ ನೀಡಿ ರಸ್ತೆ ತೆರವುಗೊಳಿಸಲು ಸುಮಾರು ಒಂದೂವರೆ ತಿಂಗಳು ಕಾಲಾವಕಾಶವನ್ನು ನೀಡಲು ತಮ್ಮಲ್ಲಿ ಕೋರುತ್ತಾ, ತೆರವುಗೊಳಿಸಿದ ಬಗ್ಗೆ ವರದಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸಲಾಗುವುದೆಂಬುದಾಗಿ".

7. ಮೇಲೆ ಉಲ್ಲೇಖಿಸಿರುವ ತಹಶೀಲ್ದಾರ್, ಗುಬ್ಬಿ ರವರ ವರದಿಯನ್ನು ಪರಿಶೀಲಿಸಲಾಗಿ, ದೂರಿನಲ್ಲಿ ಉಲ್ಲೇಖಿಸಿರುವ ಆಪಾದನೆಯಂತೆ ರಸ್ತೆ ಮತ್ತು ಸೇತುವೆಯನ್ನು ನಿರ್ಮಿಸಿ ಸಾರ್ವಜನಿಕರಿಗೆ ಮತ್ತು ಅಲ್ಲಿನ ಅಕ್ಕಪಕ್ಕದ ಜಮೀನುದಾರರಿಗೆ ಓಡಾಡಲು ಅನುಕೂಲ ಕಲ್ಪಿಸಲಾಗಿತ್ತು. ಇತ್ತೀಚೆಗೆ ಎಂ.ಎಲ್.ರಾಜಣ್ಣ ಮತ್ತು ಅವರ ಮಗ ಸೇತುವೆ ಕಿತ್ತು ಹಾಕಿ ರಸ್ತೆಯಲ್ಲಿ ಗ್ರಾಮಸ್ಥರಿಗೆ ಓಡಾಡಲು ತೊಂದರೆ ಉಂಟು ಮಾಡಿದ್ದು ತಿಳಿದುಬಂದಿದೆ, ಅದನ್ನು ಸರಿಪಡಿಸಲು 1 1/2 ತಿಂಗಳು ಕಾಲಾವಕಾಶ ಕೋರಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

8. ದಿನಾಂಕ: 19/03/2018 ಹಾಗೂ 01/06/2018 ರಂದು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಗುಬ್ಬಿ ರವರು ತಹಶೀಲ್ದಾರ್, ಗುಬ್ಬಿ ರವರಿಗೆ ಬರೆದಿರುವ ಪತ್ರವನ್ನು ಪರಿಶೀಲಿಸಲಾಗಿ, ಬಿಳಿಕಲ್ಲ ಪಾಳ್ಯ ಸರ್ವೆ ನಂ. 15/12.3.4 ರಸ್ತೆ ಖರಾಬು ಜಾಗವನ್ನು ಒತ್ತುವರಿ ತೆರೆವು ನಿರ್ಮಿಸಿರುವ ಸೇತುವೆಯನ್ನು ಒಡೆದು ಹಾಕಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಪತ್ರ ಬರೆದಿದ್ದಾರೆ.

9. ದಿನಾಂಕ: 09/04/2018 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಲಾಖೆ ಉಪ ವಿಭಾಗ, ಗುಬ್ಬಿ ರವರು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಗುಬ್ಬಿ ರವರಿಗೆ ಪತ್ರ ಬರೆದಿದ್ದು ಅದರಲ್ಲಿ, ಬಿಳಿಕಲ್ಲ ಪಾಳ್ಯ ಸರ್ವೆ ನಂ. 15/12.3.4 ರಸ್ತೆ ಖರಾಬು ಜಾಗವನ್ನು ಒತ್ತುವರಿ ತೆರೆವು ನಿರ್ಮಿಸಿರುವ ಸೇತುವೆಯನ್ನು ಒಡೆದು ಹಾಕಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಪತ್ರ ಬರೆದಿದ್ದಾರೆ ಎಂಬುದು ಕಂಡುಬರುತ್ತದೆ.

10. ದಿನಾಂಕ: 19/05/2019ರ ತಹಶೀಲ್ದಾರ್, ಗುಬ್ಬಿ ರವರ ಪತ್ರವನ್ನು ಪರಿಶೀಲಿಸಲಾಗಿದೆ ಅದರಲ್ಲಿ ಕೆಲ ಅಂಶವನ್ನು ಕೆಳಗೆ ಉಲ್ಲೇಖಿಸಲಾಗಿದೆ.

BD-9611/2018/DRE-2

"ಸದರಿ ವರದಿಯನ್ನು ಪರಿಶೀಲಿಸಲಾಗಿ, ಬಿಳಿಕಲ್ಲು ಪಾಳ್ಯದ ಸರ್ವೆ ನಂ. 15/4ರಲ್ಲಿ ಸರ್ಕಾರಿ ಖರಾಬು ಹಳ್ಳ 0–06 ಗುಂಟೆ ಖರಾಬು ದಾಖಲಾಗಿದ್ದು, ಖರಾಬು ಹಳ್ಳಕ್ಕೆ ಅಡ್ಡಲಾಗಿ ಸರ್ಕಾರದ ವತಿಯಿಂದ ಸೇತುವೆ ನಿರ್ಮಿಸಲಾಗಿದ್ದು, ಹಾಲಿ ಸ್ಥಳದಲ್ಲಿ ಸೇತುವೆಯನ್ನು ನಾಶಗೊಳಿಸಿರುತ್ತಾರೆ. ಹಾಲಿ ಸ್ಥಳದಲ್ಲಿ ಸರ್ಕಾರಿ ಸೇತುವೆ ಇದ್ದ ಪ್ರದೇಶವು ಬಿಳಿಕಲ್ಲು ಪಾಳ್ಯ ಸರ್ವೆ ನಂ. 15/4ರಲ್ಲಿನ ಸರ್ಕಾರಿ ಖರಾಬು ಹಳ್ಳದ ವ್ಯಾಪ್ತಿಯಲ್ಲಿರುತ್ತದೆ ಎಂದು ವರದಿ ಸಲ್ಲಿಸಿದ್ದು, ಸದರಿ ವರದಿಯನ್ನು ಈ ಪತ್ರಕ್ಕೆ ಲಗತ್ತಿಸಿದೆ. ಸದರಿ ವರದಿಯಂತೆ ಒತ್ತುವರಿ ತೆರವುಗೊಳಿಸಲು ಹಾಲಿ ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಚಾಲ್ತಿಯಲ್ಲಿರುವುದರಿಂದ ಚುನಾವಣೆ ನೀತಿ ಸಂಹಿತೆ ಮುಗಿದ ನಂತರ ಒತ್ತುವರಿ ತೆರವುಗೊಳಿಸಿ ಸೂಕ್ತ ಕ್ರಮ ವಹಿಸಲಾಗುತ್ತದೆ ಎಂಬ ಅಂಶವನ್ನು ತಮ್ಮ ಘನ ಅವಗಾಹನೆಗೆ ಸಲ್ಲಿಸಿದೆ".

11. ಹಾಲಿ ತಹಶೀಲ್ದಾರ್ ರವರ ವರದಿಯಲ್ಲಿಯೂ ಸಹಿತ ಬಿಳಿಕಲ್ಲ ಪಾಳ್ಯ ಸರ್ವೆ ನಂ. 15/12.3.4 ರಸ್ತೆ ಖರಾಬು ಜಾಗವನ್ನು ಒತ್ತುವರಿ ತೆರೆವು ನಿರ್ಮಿಸಿರುವ ಸೇತುವೆಯನ್ನು ಒಡೆದು ಹಾಕಲಾಗಿದೆ ಮತ್ತು ಸಾರ್ವಜನಿಕರಿಗೆ ಹಾಗೂ ಅಲ್ಲಿನ ಅಕ್ಕಪಕ್ಕದ ರೈತರುಗಳಿಗೆ ತಮ್ಮ ಜಮೀನುಗಳಿಗೆ ಹೋಗಲು ರಸ್ತೆ ಇಲ್ಲದಂತಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ದಿನಾಂಕ: 09/05/2019 ರಂದು ಹಾಲಿ ತಹಶೀಲ್ದಾರ್ ರವರು ವರದಿ ಸಲ್ಲಿಸಿದ್ದನ್ನು ಬಿಟ್ಟರೆ ಮುಂದುವರೆದು ತಾವು ಕೈಗೊಂಡ ಕ್ರಮದ ಬಗ್ಗೆ ಯಾವುದೇ ರೀತಿಯ ವರದಿಯನ್ನು ಸಲ್ಲಿಸಿರುವುದಿಲ್ಲ.

12. ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಗಣನೆಗೆ ತೆಗೆದುಕೊಂಡಾಗ ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿ, ಎಂ.ಹೆಚ್.ಪಟ್ಟಣ ಗ್ರಾಮದಿಂದ ಚಿಕ್ಕನಾಗಮಂಗಲ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ಬಿಳಿಕಲ್ಲು ಗ್ರಾಮದ ಸರ್ವೆ ನಂ. 15/12.3.4 ರಸ್ತೆ ಖರಾಬು ಜಾಗವನ್ನು ಒತ್ತುವರಿ ತೆರೆವು ಮಾಡಿ ಸೇತುವೆ ನಿರ್ಮಿಸಲಾಗಿತ್ತು. ಈಗ ಸದರಿ ಸೇತುವೆ ಒಡೆದು ಹಾಕಿ ಪುನ: ಒತ್ತುವರಿ ಮಾಡುವ ಮೂಲಕ ಸಾರ್ವಜನಿಕರಿಗೆ ಹಾಗೂ ಅಕ್ಕಪಕ್ಕದ ರೈತರಿಗೆ ತೊಂದರೆಯನ್ನು ಉಂಟು ಮಾಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ತಹಶೀಲ್ದಾರ್, ಗುಬ್ಬಿ ರವರು ಸದರಿ ರಸ್ತೆಯನ್ನು ನಿಯಮಾನುಸಾರ ನಿರ್ಮಿಸುವ ಕರ್ತವ್ಯ ಹೊಂದಿದ್ದರು ಸಹಿತ ಲೋಕಸಭಾ ಚುನಾವಣಾ ನೀತಿ ಸಂಹಿತೆ ಹಾಗೂ ಇತರೆ ಕಾರಣಗಳನ್ನು ಉಲ್ಲೇಖಿಸಿ ಸಮಯ ಕೋರಿದ್ದರು ಸಹಿತ ಹಾಗೂ ಅವರಿಗೆ ಸಮಯ ನೀಡಿದ್ದರೂ ಸಹಿತ ದೂರುದಾರರ ಕುಂದುಕೊರತೆಯನ್ನು ನಿವಾರಿಸಿಲ್ಲ ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ.

13. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿ, ಎಂ.ಹೆಚ್.ಪಟ್ಟಣ ಗ್ರಾಮದಿಂದ ಚಿಕ್ಕನಾಗಮಂಗಲ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ಬಿಳಿಕಲ್ಲು ಗ್ರಾಮದ ಸರ್ವೆ ನಂ. 15/12.3.4 ರಸ್ತೆ ಖರಾಬು ಜಾಗದ ಒತ್ತುವರಿ ತೆರೆವು ಮಾಡಿ ಸಾರ್ವಜನಿಕರಿಗೆ ಹಾಗೂ ಅಕ್ಕಪಕ್ಕದ ಜಮೀನಿನ ರೈತರಿಗೆ ಓಡಾಡಲು ಅನುಕೂಲವಾಗುವಂತೆ ರಸ್ತೆ ಹಾಗೂ ಸೇತುವೆ ನಿರ್ಮಿಸಲು ಕ್ರಮ ಜರುಗಿಸುವಂತೆ ನಿರ್ದೇಶಿಸಿ 2ನೇ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

14. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

3/3/20

**[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**